DEEDS
# ಸಂವಾದ
ಸಮತೆಯ ಸಮಾಜದೆಡೆಗೆ

ಸಂವಾದ 2

ಖಾಸಗಿ ಪ್ರಸಾರಕ್ಕಾಗಿ ಮಾತ್ರ

## ನಿಮ್ಮೊಂದಿಗೆ ..........

ಮಹಿಳಾಪರವಾದ ಕಾನೂನುಗಳ ಮಟ್ಟಿಗೆ ಜಗತ್ತಿನ ಅನೇಕ ದೇಶಗಳಿಗಿಂತ ಭಾರತವು ಪ್ರಗತಿಪರವಾಗಿದೆ ಎಂಬುದು ಆಗಾಗ ಕೇಳಿಬರುತ್ತಿರುವ ಮಾತು. ನಮ್ಮ ಸಂವಿಧಾನವು ಮಹಿಳೆ ಹಾಗೂ ಪುರುಷರಿಗೆ ಸಮಾನವಾದ ಹಕ್ಕುಗಳನ್ನು ನೀಡಿದೆ. ಹಾಗೂ ಮಹಿಳೆಯರ ಹಿತರಕ್ಷಣೆಗಾಗಿ ಅನೇಕ ನೀತಿಗಳನ್ನು ಒಳಗೊಂಡಿದೆ. ಆದರೂ ಲಿಂಗತ್ವ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಗಳು ಕಾಣಬೇಕಾದಷ್ಟು ಕಂಡುಬರುತ್ತಿಲ್ಲ. ಸಂವಿಧಾನದಲ್ಲಿ ನಮೂದಿಸಿದ ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಲಿಂಗತ್ವ ಸಮಾನತೆ ಇರುವ ಸಮಾಜವೊಂದರ ಕನಸು ಇನ್ನೂ ಕನಸಾಗಿಯೇ ಉಳಿದಿದೆ. ಮಹಿಳೆಯರು ಹೊಸ ದಿನಮಾನಗಳಲ್ಲಿ ಹೊಸತರದ ಕ್ರೌರ್ಯಗಳಿಗೆ ಬಲಿಯಾಗುತ್ತಲೇ ಇದ್ದಾರೆ. ಅವರ ಚಲನವಲನದ ಮೇಲೆ ಹಾಕುತ್ತಿರುವ ಹೊಸ ನಿಬಂಧನೆಗಳನ್ನು ಅವಳ ಮೇಲಿನ ಹೊಸ ಹಿಂಸೆಗಳು ಬಯಲಿಗೆಳೆಯುತ್ತಿವೆ. ಜಾಗತೀಕರಣ, ಖಾಸಗೀಕರಣ, ಆರ್ಥಿಕ ಸುಧಾರಣೆ, ಮಾಹಿತಿ ತಂತ್ರಜ್ಞಾನ ಮುಂತಾದ ಸಂಕೀರ್ಣ ಶಕ್ತಿಗಳ ಹಿಡಿತದಲ್ಲಿ ಸಿಲುಕಿ ನಲುಗುತ್ತಿರುವ ಹೆಣ್ಣುಮಕ್ಕಳ ಕರುಣ ಕತೆಗಳು ಬೀದಿಗಿಳಿಯುತ್ತಿವೆ. ಕುಟುಂಬ ಪರಿಧಿಯೊಳಗೆ ನಡೆಯುತ್ತಿರುವ ದೌರ್ಜನ್ಯಗಳು, ಸಾಮಾಜಿಕ ದೌರ್ಜನ್ಯಗಳು ಸಬಲೀಕರಣದತ್ತ ಹೆಜ್ಜೆ ಮುಂದಿಡುತ್ತಿರುವ ಮಹಿಳೆಯರನ್ನು ಮತ್ತೆ ಹಿಂದಕ್ಕೆ ಎಳೆಯುತ್ತಿವೆ. ಮಹಿಳೆಯರ ಮೇಲಾಗುವ ದೌರ್ಜನ್ಯಗಳು ಮಹಿಳೆಯರ ಅಸ್ತಿತ್ವಕ್ಕೇ ಮಾರಕವಾಗಿರುವ ಈ ದಿನಗಳಲ್ಲಿ ಮಹಿಳೆಯರಲ್ಲಿ ಜಾಗೃತಿ ಮೂಡಿಸಿ ಮಹಿಳಾಪರ ಕಾನೂನುಗಳ ಪರಿಚಯ ಮಾಡಿಸಿ ಮಹಿಳೆಯರಲ್ಲಿ ನೈತಿಕ ಧೈರ್ಯ, ಆತ್ಮಸ್ಥೈರ್ಯವನ್ನು ತುಂಬುವ, ಅವರ ಮೇಲಿನ ದೌರ್ಜನ್ಯಗಳನ್ನು ತಡೆಯುವ ದಿಕ್ಕಿನಲ್ಲಿ ಸಾಗಬೇಕಿದೆ.

ಮಹಿಳೆಯರ ಮೂಲಭೂತ ಹಕ್ಕುಗಳ ರಕ್ಷಣೆ ಹಾಗೂ ಆಕೆಗೆ ನ್ಯಾಯ ಒದಗಿಸಲು ಅನೇಕ ಮಹಿಳಾಪರ ಕಾನೂನುಗಳು ಇದ್ದರೂ ಕೂಡಾ ಅವರು ತಮ್ಮ ಹಕ್ಕು, ಕರ್ತವ್ಯ, ರಕ್ಷಣೆ, ಪ್ರತಿಭಟನೆ, ದೌರ್ಜನ್ಯಕ್ಕೊಳಗಾದ ಇತರ ಹೆಣ್ಣುಮಕ್ಕಳಿಗೆ ಸ್ಪಂದನೆ ಇತ್ಯಾದಿಗಳನ್ನು ಗಂಭೀರವಾಗಿ ಪರಿಗಣಿಸದೆ ಇರುವುದು ಅವರು ಕಾನೂನಿನ ಅರಿವಿನ ಕೊರತೆಯಿಂದ ಬಳಲುತ್ತಿದ್ದಾರೆ ಎಂಬುದನ್ನು ಸೂಚಿಸುತ್ತದೆ. ಮಹಿಳೆಯರು ತಮ್ಮ ಸುತ್ತಲಿನ ಶೋಷಣಾತ್ಮಕ ಶಕ್ತಿಗಳ ವಿರುದ್ಧ ಹೋರಾಡಬೇಕಾಗಿದೆ. ತಮ್ಮ ನ್ಯಾಯಬದ್ಧ ಸ್ಥಾನವನ್ನು ಮರಳಿ ಗಳಿಸಬೇಕಿದೆ. ಇದು ಸಾಧ್ಯವಾಗಬೇಕಾದರೆ ಪ್ರಧಾನ ಅಸ್ತ್ರಗಳಾದ ಕಾನೂನು ಮತ್ತು ಕಾನೂನಾತ್ಮಕ ಹಕ್ಕುಗಳು ಅವರಿಗೆ ಸಿಗುವಂತಾಗಬೇಕು. ಆದರೆ ನ್ಯಾಯದಾನ ವ್ಯವಸ್ಥೆಯ ಭಾಗಗಳಾದ ನ್ಯಾಯಾಧೀಶರು, ಪೊಲೀಸರು, ವಕೀಲರು ಮುಂತಾದವರು ಎಲ್ಲಿಯವರೆಗೆ ಮಹಿಳಾಪರ ಕಾಳಜಿ ಹೊಂದುವುದಿಲ್ಲವೋ ಲಿಂಗತ್ವ ಸಂವೇದನಾಶೀಲ ರಾಗಿರುವುದಿಲ್ಲವೋ ಅಲ್ಲಿಯವರೆಗೆ ಅನ್ಯಾಯಕ್ಕೆ ಒಳಗಾದ ಮಹಿಳೆಯರಿಗೆ ನ್ಯಾಯ ಸಿಗುವುದೆಂಬ ಭರವಸೆ ಇಡುವುದು ಕಷ್ಟ. ಜತೆಗೆ ಹಿಂಸೆಯ ಬಲಿಪಶುಗಳು ಮತ್ತು ಪೊಲೀಸು, ನ್ಯಾಯವಾದಿಗಳು, ನ್ಯಾಯಾಲಯಗಳಂತಹ ನ್ಯಾಯ ವ್ಯವಸ್ಥೆಗಳ ನಡುವೆ ಬಲುದೊಡ್ಡ ಕಂದರವೊಂದು ನಿರ್ಮಾಣವಾಗಿದೆ. ಈ ಕಂದರವನ್ನು ಮುಚ್ಚಲು ನ್ಯಾಯ ವ್ಯವಸ್ಥೆಯನ್ನು ಸಂವೇದನಾಶೀಲಗೊಳಿಸಲು ದುಡಿಯುವ ಕೈಗಳ ಆವಶ್ಯಕತೆಯಿದೆ.

ಈ ಹಿನ್ನೆಲೆಯಲ್ಲಿ ಡೀಡ್ಸ್ ಸಂಸ್ಥೆಯು ಇತ್ತೀಚಿನ ವರ್ಷಗಳಿಂದ ಕರ್ನಾಟಕದ ಐದು ಜಿಲ್ಲೆಗಳಲ್ಲಿ ಪಾರಾಲೀಗಲ್ ಸುಗಮಗಾರರನ್ನು ತರಬೇತುಗೊಳಿಸುತ್ತಿದೆ. ಪ್ರಸ್ತುತ ಗದಗ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಪಾರಾಲೀಗಲ್ ಸುಗಮಗಾರರನ್ನು ರೂಪಿಸುವ ಕಾರ್ಯಚಟುವಟಿಕೆಗಳನ್ನು ಹೊಂದಿರುವ ಸಂಸ್ಥೆಯು ಮೊದಲ ಹಂತದ ಲಿಂಗತ್ವ ತರಬೇತಿಯನ್ನು ಪೂರೈಸಿ ಎರಡನೆ ಹಂತದ ಕಾನೂನು ತರಬೇತಿಯನ್ನು ನೀಡಲು ಸಿದ್ಧವಾಗಿದೆ. ಈ ತರಬೇತಿಯಲ್ಲಿ ಭಾಗವಹಿಸುವ ಎಲ್ಲ ಸುಗಮಗಾರರನ್ನು ಪ್ರೀತಿಯಿಂದ ಸ್ವಾಗತಿಸುತ್ತೇವೆ.

## ಪ್ರಶಸ್ತಿ – ಸನ್ಮಾನ

ಡೀಡ್ಸ್ ಸಂಸ್ಥೆಯ ನಿರ್ದೇಶಕರಾದ ಮರ್ಲಿನ್ ಮಾರ್ಟಿಸ್ ರವರು ಸುಮಾರು 35 ವರ್ಷಗಳಿಂದ ಸಂಸ್ಥೆಯಲ್ಲಿ ಕ್ರಿಯಾಶೀಲ ರಾಗಿದ್ದು, ಅದನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ. ತಮ್ಮ ಖಚಿತ ಲಿಂಗತ್ವ ಪರಿಕಲ್ಪನೆ, ಮಹಿಳಾಪರ ಕಾಳಜಿಗಳಿಂದಾಗಿ ಮರ್ಲಿನ್ ಅವರು ಮಹಿಳಾ ಸಬಲೀಕರಣದ ಕಾರ್ಯ ಕ್ಷೇತ್ರಗಳಲ್ಲಿ ಪ್ರಮುಖವಾಗಿ ಗುರುತಿಸಿಕೊಂಡವರು. ಅವರ ಪ್ರತಿಭೆ, ಪರಿಶ್ರಮ, ಕಾಳಜಿಗಳನ್ನು ಗುರುತಿಸಿ ಬಿಜಾಪುರ ಅಕ್ಕಮಹಾದೇವಿ ವಿವಿಯು ಇತ್ತೀಚೆಗೆ ಅವರನ್ನು ಗೌರವಿಸಿ, ಸನ್ಮಾನಿಸಿತು.

ಮಂಗಳೂರಿನ ಕ್ರೈಸ್ತ ಮಹಿಳೆಯರ ಅಸೋಸಿಯೇಶನ್ ಕೂಡಾ ಅವರನ್ನು ಇತ್ತೀಚೆಗೆ ಸನ್ಮಾನಿಸಿತು.



## ಸಂಚಲನ ದಕ್ಷಿಣಕನ್ನಡ



ಡೀಡ್ಸ್ ಸಂಸ್ಥೆ ರೂಪಿಸಿರುವ ಕರ್ನಾಟಕ ರಾಜ್ಯ ತರಬೇತುದಾರರ ಸಂಚಲನದ ದಕ್ಷಿಣಕನ್ನಡ ಜಿಲ್ಲಾ ಸಂಚಲನವು ಕಳೆದ 9 ವರ್ಷಗಳಿಂದ ದಕ್ಷಿಣಕನ್ನಡದಲ್ಲಿ ಕ್ರಿಯಾಶೀಲವಾಗಿದೆ. ಶಾಲಾ ಕಾಲೇಜು, ಸ್ವಯಂಸೇವಾ ಸಂಸ್ಥೆ, ಗ್ರಾಮಸಭೆ ಮುಂತಾದ ಕಡೆಗಳಲ್ಲಿ ಮಾಹಿತಿ ನೀಡುತ್ತಿದ್ದಾರೆ. ಆಶಾಲತಾ ಸುವರ್ಣ, ಹರಿಣಿ, ವತ್ಸಲಾ ನಾಯಕ್, ಆಶಾಲತಾ ಬೇಕಲ್, ಲಿಲ್ಲಿ ಮೇರಿ, ಸ್ವಪ್ನಾ ಶೆಣೈ, ಕಮಲಾ ಗೌಡ, ಪ್ರೇಮಿ ಫೆರ್ನಾಂಡಿಸ್ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಆಮಂತ್ರಿತರಾಗುತ್ತಿದ್ದಾರೆ. ಆರ್ಥಿಕ ದೃಢತೆಗಾಗಿ ಮಂಗಳೂರು ಮಹಾನಗರಪಾಲಿಕೆಯ ಸಹಯೋಗದೊಂದಿಗೆ ಸಾವಯವ ಗೊಬ್ಬರವನ್ನು ಖರೀದಿಸಿ ಸಂಚಲನ ಹೆಸರಿನಲ್ಲಿ ಮಾರಾಟ ಮಾಡುವ ಸಾಹಸಕ್ಕಿಳಿದು ಯಶಸ್ವಿಗಳಾಗುತ್ತಿದ್ದಾರೆ.

## ಸಂವಾದ–ಸಾಂತ್ವನ

ಅದೊಂದು ಊರು. ಬಾಲ್ಯವಿವಾಹದ ಪಿಡುಗು ವಿಪರೀತವಿದ್ದ ಆ ಊರಿನಲ್ಲಿ ಹೊರ ಜಿಲ್ಲೆಯ ಸಂಸ್ಥೆಯೊಂದು ಬಂದು ಈ ಪಿಡುಗಿನ ವಿರುದ್ಧ ಜನಜಾಗೃತಿ ಮೂಡಿಸುವ ಕೆಲಸ ಮಾಡುತ್ತಿತ್ತು. ಹೀಗಿರುವಾಗಲೇ, ಆ ಊರಿನ ಶಾಲೆಯೊಂದರ ಶಿಕ್ಷಕ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದು, ಯಾರೊಂದಿಗೂ ಹೇಳಬಾರದೆಂದು ಆ ಹುಡುಗಿಯರನ್ನು ಹೆದರಿಸಿದ್ದ. ಇದಾದ ಕೆಲ ದಿನಗಳ ಬಳಿಕ ಮಕ್ಕಳ ಸಹಾಯವಾಣಿಯವರು ಬಂದು ಸಹಾಯ ವಾಣಿಯ ಬಗ್ಗೆ ಜಾಗೃತಿ ಕಾರ್ಯಕ್ರಮ ನಡೆಸಿದ್ದರು. ಪರಿಣಾಮವಾಗಿ ಕಿರುಕುಳಕ್ಕೊಳಗಾದ ಮಕ್ಕಳು ಧೈರ್ಯದಿಂದ 1098 ಗೆ ಕರೆ ಮಾಡಿ ಎಲ್ಲವನ್ನೂ ಹೇಳಿಕೊಂಡಿದ್ದಾರೆ. ಶಿಕ್ಷಕನ ಮೇಲೆ ಕೇಸು ದಾಖಲಾಯಿತು. ಈ ಸುದ್ದಿ ಮಾಧ್ಯಮಗಳ ಮೂಲಕ ಪ್ರಚಾರವಾಯಿತು. ಇದನ್ನು ಗಮನಿಸಿದ ಊರಿನ ಗಂಡಸರು ಆ ಊರಲ್ಲಿ ಕೆಲಸ ಮಾಡುತ್ತಿದ್ದ ಸಂಸ್ಥೆಯು ಮನೆ ಮನೆಗೆ ವಿತರಿಸಿದ್ದ ಕರಪತ್ರ ಕ್ಯಾಲೆಂಡರುಗಳಲ್ಲಿ ಸಹಾಯವಾಣಿಯ ನಂಬರ್ ಇರುವುದನ್ನು ಗಮನಿಸಿ ಇದನ್ನು ನೋಡಿಯೇ ಮಕ್ಕಳು ದೂರು ಕೊಟ್ಟಿದ್ದಾರೆ ಎಂದು ತೀರ್ಮಾನಿಸಿದರು. ಶಿಕ್ಷಕರ ಸಿಟ್ಟಿಗೆ ನಾವು ಗುರಿಯಾಗಬೇಕಾಗುತ್ತದೆ ಎಂದು ಭಾವಿಸಿ ಇಂತಹ ಸಾಮಗ್ರಿಗಳನ್ನು ಇನ್ನು ಮುಂದೆ ಹಂಚಬಾರದು ಎಂದು ತಮ್ಮ ಹೆಂಡತಿಯರಿಗೆ ಕಟ್ಟಪ್ಪಣೆ ಮಾಡಿದರು. ಆ ಊರಿನ ಮಹಿಳೆಯರು ಏನೂ ಮಾಡಲು ತೋಚದೆ ಕೂತಿದ್ದಾರೆ.

**ಪ್ರಶ್ನೆಗಳು**

- ಇಂತಹ ಸಂದರ್ಭ ನಿಮ್ಮೂರಲ್ಲಿ ಎದುರಾದರೆ ನೀವು ಹೇಗೆ ಅದನ್ನು ಎದುರಿಸುತ್ತೀರಿ?
- ಆ ಊರಿನ ಗಂಡಸರಿಗೆ ಯಾವೆಲ್ಲ ರೀತಿಯಲ್ಲಿ ಮನವರಿಕೆ ಮಾಡಿಕೊಡಬಹುದು?

(ಈ ಪ್ರಶ್ನೆಗಳಿಗೆ ಉತ್ತರ ಬರೆದು ಡೀಡ್ಸ್ ವಿಳಾಸಕ್ಕೆ ಕಳುಹಿಸಿಕೊಡಿ. ಮುಂದಿನ ಸಂಚಿಕೆಯಲ್ಲಿ ಅವನ್ನು ಪ್ರಕಟಿಸಲಾಗುವುದು)

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರ**

- ದೈಹಿಕ, ಮಾನಸಿಕ ಬೆಳವಣಿಗೆಯಾಗುವ ಮೊದಲು ಮದುವೆ ತಾಯ್ತನ ಆ ಹೆಣ್ಣಿನ ಜೀವಕ್ಕೆ ಅಪಾಯ.
- ನಮ್ಮ ಸುತ್ತ ಬಾಲ್ಯವಿವಾಹ ನಡೆಯುವುದು ತಿಳಿದುಬಂದರೆ 1098 ಗೆ ಕರೆಮಾಡಿ ಆ ಮದುವೆಯನ್ನು ನಿಲ್ಲಿಸುತ್ತೇವೆ.

**ಶಶಿಕಲಾ ಮರದಪ್ಪ,**
ಹುಣಸೆ ಮರದ ಬಾಲಕಿಯರ ಪ್ರೌಢಶಾಲೆ, ಕೊಪ್ಪಳ

## ಅವಳು ಅಡುಗೆ ಮಾಡುತ್ತಾಳೆ

ಅವಳು ಅಡುಗೆ ಮಾಡುತ್ತಾಳೆ
ಬೆಳಗಿಗಾಗಿ ತಿಂಡಿ
ಮಧ್ಯಾಹ್ನಕ್ಕೆ ಊಟ
ಮತ್ತು ರಾತ್ರಿಯಡುಗೆ

ಅವಳು ಅಡುಗೆ ಮಾಡುತ್ತಾಳೆ
ಶುಚಿ ರುಚಿಯಾಗಿ
ಸಮಯಕ್ಕೆ ಸರಿಯಾಗಿ
ಎಲ್ಲ ದಿನಸು ಇರುವಾಗಲೂ
ಏನೂ ಇಲ್ಲದಿರುವಾಗಲೂ

ಮಗನಿಗೆ ಇಷ್ಟವಿಲ್ಲದ್ದು
ಮಗಳಿಗೆ ಇಷ್ಟವಾದದ್ದು
ಗಂಡನಿಗೆ ಬೇಕಿದ್ದದ್ದು
ಎಲ್ಲ ಗಮನದಲ್ಲಿಟ್ಟು
ಅವಳು ಅಡುಗೆ ಮಾಡುತ್ತಾಳೆ

ಹಬ್ಬದ ದಿನ
ನೆಂಟರು ಬಂದ ದಿನ
ಹೆಚ್ಚು ಹೆಚ್ಚು ನಮೂನೆಯ
ಹೆಚ್ಚು ಹೆಚ್ಚು ಅಡುಗೆಯ
ಹೆಚ್ಚು ಹೆಚ್ಚು ರುಚಿಯಾಗಿ
ಕಡಿಮೆ ಅವಧಿಯಲ್ಲಿ
ಮಾಡಿಹಾಕುತ್ತಾಳೆ

ಅವಳು ಅಡುಗೆ ಮಾಡುತ್ತಾಳೆ
ಅವನು ಉಣ್ಣುವ ಅವಸರದಲ್ಲಿ
ಅಡುಗೆ ರುಚಿಕಟ್ಟಾಗಿದೆ ಎನ್ನದಿದ್ದರೂ
ಯಾವುದೋ ತಲೆಬಿಸಿಯಲ್ಲಿ
ರುಚಿ ಕೆಟ್ಟುಹೋಗಿದೆ
ಎಂದು ಬಯ್ದರೂ

ಮತ್ತವಳು ಅಡುಗೆ ಮಾಡುತ್ತಾಳೆ
ಎಲ್ಲರ ಊಟವಾದ ಮೇಲೆ
ಉಣ್ಣುತ್ತಿರುವುದಕೂ
ನೆನ್ನೆಯ ಉಳಿದ ತಂಗಳು
ಚೆಲ್ಲಕೂಡದೆಂದು ತಿನ್ನುತ್ತಿರುವುದಕೂ
ಎರಡು ತುತ್ತು ಬಾಯಿಗಿಡುವುದಕ್ಕಿಲ್ಲ
ಕೆಲಸವೊಂದ ಜ್ಞಾಪಿಸಿ
ಎಬ್ಬಿಸಿಬಿಡುವುದಕೂ ತುಸುವೂ
ಬೇಸರಿಸದೆ
ಅವಳು ಅಡುಗೆ ಮಾಡುತ್ತಾಳೆ

ರಜೆಯೆಂಬುದ ಕಂಡು ಕೇಳರಿಯದ
ಅವಳು ಅಡುಗೆ ಮಾಡುತ್ತಲೇ
ಇರುತ್ತಾಳೆ
ಹಿಂದೆಯೂ ಮಾಡುತ್ತಿದ್ದಳು
ಈಗಲೂ ಮಾಡುತ್ತಾಳೆ
ಮುಂದೆಯೂ ಮಾಡುತ್ತಲೇ
ಇರುತ್ತಾಳೆ

ಒಂದು ಸುದೀರ್ಘ ತಪಸ್ಸಿನಂತೆ
ಅಡುಗೆಯ ಕುರಿತೇ ಯೋಚಿಸುತ್ತಾಳೆ.
ಅಡುಗೆಯ ಕುರಿತೇ ಓದುತ್ತಾಳೆ
ಅಡುಗೆಯದೇ ಟಿವಿ ಶೋಗಳನ್ನು
ಎಡಬಿಡದೆ ನೋಡುತ್ತಾಳೆ
ಎಲ್ಲವನ್ನೂ ಕಲಿಯುತ್ತಾಳೆ
ಎಲ್ಲವನ್ನೂ ಮಾಡಿ
ಉಣಬಡಿಸುತ್ತಾಳೆ

ಅಡುಗೆ ಮಾಡುತ್ತಾಳವಳು
ಆರೋಗ್ಯವಾಗಿ ಇರುವಾಗಲೂ
ಇಲ್ಲದಿರುವಾಗಲೂ
ಉಸಿರು ನಿಲ್ಲುವವರೆಗೂ

ಮತ್ತು...
ಅವಳು ಅಡುಗೆ ಮಾಡುತ್ತಾಳೆ
'ನೀನೂ ಹೊತ್ತು ಹೊತ್ತಿಗೆ
ಉಂಡೆಯಾ ತಿಂದೆಯಾ?'
ಎಂದು ಎಂದೂ ಕೇಳ
ಹೇಳದವನೊಬ್ಬನಿಗಾಗಿ
ಅವಳು ಅಡುಗೆ ಮಾಡುತ್ತಲೇ
ಇರುತ್ತಾಳೆ

– ಕಾದಂಬಿನಿ ರಾವಿ

# ಗದಗ ಜಿಲ್ಲೆ

## ಹಳೆಯ ಪೂರಕ ಕಾನೂನು ಸುಗಮಗಾರರ ತರಬೇತಿ ಹಂತ 1

ಸದರಿ ತರಬೇತಿಯು ಗದಗ ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ಮೂರು ದಿನಗಳ ಕಾಲ ನಡೆಯಿತು ಲಿಂಗ–ಲಿಂಗತ್ವ, ಸಾಮಾಜೀಕರಣ, ಪಿತೃಪ್ರಧಾನತೆ, ಬಾಲ್ಯವಿವಾಹ, ಕೌಟುಂಬಿಕ ದೌರ್ಜನ್ಯ, ಸಂವಹನ ಕೌಶಲಗಳು ಇವೇ ಮುಂತಾದ ಪಠ್ಯಗಳನ್ನು ಒಳಗೊಂಡ ಕಲಾಪಗಳನ್ನು ಬಳ್ಳಾರಿಯಿಂದ ರೇಣುಕಾ, ಪಂಕಜ, ಗದಗದಿಂದ ಪ್ರಭಾವತಿ, ಮಂಜುಳ ಕಳಕೇರಿ, ಮಂಜುಳ ಇಟಗಿ, ಫರೀದಾ ಬೇಗಂ ಮತ್ತು ಯಶೋದಾರವರು ನಿರ್ವಹಿಸಿದರು. ತರಬೇತಿಯಲ್ಲಿ 8 ಮಂದಿ ಭಾಗವಹಿಸಿದ್ದರು. ಡೀಡ್ಸ್‌ನ ಮರ್ಲಿನ್ ಮಾರ್ಟಿಸ್, ತುಕಾರಾಮ ಎಕ್ಕಾರು, ಗುಲಾಬಿ ಬಿಳಿಮಲೆ, ದಿವ್ಯಾ ಜೋಗಿ ಭಾಗವಹಿಸಿದ್ದರು. ಡಾ. ಎಂ ಜಿ ಶೋಭಾದೇವಿಯವರು ವೀಕ್ಷಕರಾಗಿ ಸಲಹೆ ಸೂಚನೆಗಳನ್ನು ನೀಡಿದರು. ಫಕ್ಕೀರಮ್ಮ ಲಕ್ಕುಂಡಿಯವರು ಸ್ವಾಗತಿಸಿ ವಂದಿಸಿದರು.

### ಗದಗ ಜಿಲ್ಲಾ ಪೂರಕ ಕಾನೂನು ಸುಗಮಗಾರರ ತರಬೇತಿ ಹಂತ–1

ಗದಗ ಜಿಲ್ಲಾ ತರಬೇತಿಯು ದಿನಾಂಕ 16.6.2017 ರಿಂದ 19.6.2017ರ ವರೆಗೆ ಗದಗಿನ ಗಿರಿಜಾಶಂಕರ ಹಾಸ್ಟೆಲ್‌ನಲ್ಲಿ ನಡೆಯಿತು. ತರಬೇತಿಯಲ್ಲಿ



35 ಮಂದಿ ಭಾಗವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಖ್ಯಾತ ಹೋರಾಟಗಾರ್ತಿ ಹೇಮಾ ಪಟ್ಟಣಶೆಟ್ಟಿಯವರು ನೆರವೇರಿಸಿದರು. ಅಕ್ಕಮಹಾದೇವಿ ಕೆ ಎಚ್, ಗದಗ ಜಿಲ್ಲಾ ಸ್ವಯಂಸೇವಾ ಸಂಸ್ಥೆಗಳ ಒಕ್ಕೂಟದ ನಿರ್ದೇಶಕರಾದ ಜಯಶ್ರೀ ಹಿರೇಮಠ, ಡೀಡ್ಸ್‌ನ ಮರ್ಲಿನ್ ಮಾರ್ಟಿಸ್ ಉಪಸ್ಥಿತರಿದ್ದರು ತರಬೇತಿ ಸಾಮಗ್ರಿಗಳನ್ನು ಇದೇ ಸಂದರ್ಭದಲ್ಲಿ ಬಿಡುಗಡೆಗೊಳಿಸಲಾಯಿತು.

ಬಳಿಕ, ಲಿಂಗ–ಲಿಂಗತ್ವ. ಲಿಂಗತ್ವದ ಸಾಮಾಜೀಕರಣ, ಪಿತೃಪ್ರಧಾನತೆ, ಬಾಲ್ಯವಿವಾಹ, ಕೌಟುಂಬಿಕ ದೌರ್ಜನ್ಯದ ವಿಷಯಗಳ ಮೇಲಿನ ಕಲಾಪಗಳನ್ನು ಮರ್ಲಿನ್ ಮಾರ್ಟಿಸ್, ರೇಣುಕಾ, ಪ್ರಭಾವತಿ ಬೆಟಗೇರಿಯವರು ನಿರ್ವಹಿಸಿದರು. ನಾಲ್ಕನೆಯ ದಿನ ಸೋಮಾಪುರದಲ್ಲಿ ತಳಮಟ್ಟದ ಮಾಹಿತಿ ಕಾರ್ಯಕ್ರಮವನ್ನು ಖ್ವಾಜಾ ಹುಸೇನ್ ಮತ್ತು ಜಯರುನ್‌ಬಿ ನಿರ್ವಹಿಸಿದರು. ಭಾಗವಹಿಸಿದ ಎಲ್ಲರಿಗೂ ಕರಪತ್ರ, ಕ್ಯಾಲೆಂಡರ್‌ಗಳನ್ನು ವಿತರಿಸಲಾಯಿತು. ಅಶ್ವಿನಿ, ರೇಖಾ, ರೇಣುಕಾ ಛಬ್ಬಿಯವರು ವರದಿ ಮಂಡನೆ ಮಾಡಿದರು. ಫಕ್ಕೀರಮ್ಮ ಲಕ್ಕುಂಡಿ ಧನ್ಯವಾದ ಸಮರ್ಪಿಸಿದರು. ತುಕಾರಾಮ ಎಕ್ಕಾರು ತರಬೇತಿಯನ್ನು ಸಂಯೋಜಿಸಿದರು. ದಿವ್ಯಾ ಜೋಗಿ, ಗುಲಾಬಿ ಬಿಳಿಮಲೆ ಹಾಜರಿದ್ದರು.

### ಸಹಭಾಗಿ ಸ್ವಯಂಸೇವಾ ಸಂಸ್ಥೆಗಳ ಸಭೆ ಮತ್ತು ಪೂರಕ ಕಾನೂನು ಸುಗಮಗಾರರ ಅನುಭವ ಹಂಚಿಕೆ



ಈ ಸಭೆಯು 7.10.2017 ರಂದು ಗದಗಿನ ಮರಾಠಾ ವಿದ್ಯಾವರ್ಧಕ ಸಂಘದಲ್ಲಿ ನಡೆಯಿತು. ಗದಗಿನ ಸಂಚಲನದ ಅಧ್ಯಕ್ಷರು ಹಾಗೂ ಸಮಿತಿ ಸದಸ್ಯರು ಮತ್ತು 27 ಮಂದಿ ಸುಗಮಗಾರರು ಭಾಗವಹಿಸಿದ್ದರು. ತಳಮಟ್ಟದ ಮಾಹಿತಿ ಕಾರ್ಯಕ್ರಮಗಳು ಒಳ್ಳೆಯ ಅನುಭವಗಳನ್ನು ನೀಡಿವೆ, ಹಲವಾರು ಮಹಿಳೆಯರು ತಮ್ಮ ಮನದಾಳದ ನೋವನ್ನು ಹಂಚಿಕೊಂಡು ಮನಸು ಹಗುರವಾಯಿತು ಎಂದಿದ್ದಾರೆ, ಮನೆ ಮನೆ ಸಾಮಗ್ರಿಗಳಿಗೆ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿ ಅವುಗಳನ್ನು ಹಂಚಿದ್ದಾರೆ ಎಂದೆಲ್ಲ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಡೀಡ್ಸ್‌ನ ತುಕಾರಾಮ, ಮೋಹನ ಚಂದ್ರ ಮತ್ತು ದಿವ್ಯಾಜ್ಯೋತಿ ಉಪಸ್ಥಿತರಿದ್ದರು. ಫಕ್ಕೀರಮ್ಮ



ಲಕ್ಕುಂಡಿ ಎಲ್ಲರನ್ನು ಸ್ವಾಗತಿಸಿ ವಂದಿಸಿದರು.

#### ಮಾಹಿತಿ–ಮಾರ್ದನಿ

ತಳಮಟ್ಟದ ಮಾಹಿತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಹಿಳೆಯರು ತಮ್ಮ ಒಳಗುದಿಯನ್ನು ತೆರೆದಿಟ್ಟದ್ದು ಹೀಗೆ–

- ಈ ಎಲ್ಲ ವಿಷಯಗಳು ನಾವು ಚಿಕ್ಕವರಿರುವಾಗಲೇ ತಿಳಿದಿದ್ದರೆ ನಾವು ಬಾಲ್ಯವಿವಾಹ ಮಾಡಿಕೊಳ್ಳುತ್ತಿರಲಿಲ್ಲ. ನಮ್ಮ ಮತ್ತು ನಮ್ಮ ಮಕ್ಕಳ ಜೀವನ ತುಂಬಾ ಚೆನ್ನಾಗಿರುತ್ತಿತ್ತು, ಹಿರಿಯರ ಆಸೆಗಳಿಗೆ ನಮ್ಮ ಜೀವನವನ್ನು ಬಲಿ ಕೊಟ್ಟಿದ್ದಾರೆ.

- ಹೊಡೆಯುವುದು, ಬಯ್ಯುವುದು ಗಂಡನ ಹಕ್ಕು ಅಲ್ಲ, ಅದು ತಪ್ಪು ಎಂದು ನಮಗೆ ಈಗ ತಿಳಿಯಿತು. ಇನ್ನು ಮುಂದೆ ನಾವು ಸಹಿಸಿಕೊಳ್ಳದೆ, 'ನೀವು ಮಾಡುತ್ತಿರುವುದು ತಪ್ಪು' ಎಂದು ತಿಳಿಹೇಳುತ್ತೇವೆ. ಮಕ್ಕಳನ್ನು ಸಮಾನವಾಗಿ ನೋಡಿಕೊಳ್ಳುತ್ತೇವೆ. ಬಾಲ್ಯವಿವಾಹಗಳು ನಡೆಯದಂತೆ ಎಚ್ಚರಿಕೆ ವಹಿಸುತ್ತೇವೆ ಎಂದರು.



- ಸುವರ್ಣ ಎಂಬವರು, "ನನಗೆ ಕೇವಲ 9 ವರ್ಷದವಳಿದ್ದಾಗಲೇ ಸೋದರ ಮಾವನಿಗೆ ಕೊಟ್ಟು ಮದುವೆ ಮಾಡಿದರು. ನನಗೆ ಮತ್ತು ನನ್ನ ಗಂಡನಿಗೆ 20 ವರ್ಷಗಳ ಅಂತರ. ನಾನು ಸಾಕಷ್ಟು ಕಷ್ಟಗಳನ್ನು ಅನುಭವಿಸಿದ್ದೇನೆ. ಇಂತಹ ತಿಳಿವಳಿಕೆಗಳನ್ನು ಹೇಳುವವರು ಆಗ ಯಾರೂ ಇರಲಿಲ್ಲ" ಎಂದು ಬೇಸರ ವ್ಯಕ್ತಪಡಿಸಿದರು.

ವರದಿ: ಫಕ್ಕೀರಮ್ಮ ಎಸ್ ಲಕ್ಕುಂಡಿ

# ಕೊಪ್ಪಳ ಜಿಲ್ಲೆ

## ಕೊಪ್ಪಳ ಜಿಲ್ಲಾ ಪೂರಕ ಕಾನೂನು ಸುಗಮಗಾರರ ತರಬೇತಿ ಹಂತ 1

ಜುಲೈ 14 ರಿಂದ 17 ರ ವರೆಗೆ ಕೊಪ್ಪಳದ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಲ್ಲಿ ತರಬೇತಿಯು ನಡೆಯಿತು. 30 ಮಂದಿ ಮಹಿಳೆಯರು ಹಾಗೂ 18 ಪುರುಷರನ್ನೊಳಗೊಂಡಂತೆ ಒಟ್ಟು 48 ಮಂದಿ ಭಾಗಹಿಸಿದ್ದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಶ್ರೀದೇವಿ ಗದ್ದಿನಕೇರಿಯವರು ತರಬೇತಿಯನ್ನು ಉದ್ಘಾಟಿಸಿದರು. ಹೋರಾಟಗಾರ್ತಿ ಸಾವಿತ್ರಿ ಮುಜುಮುದಾರ ಅವರು ಮುಖ್ಯ ಅತಿಥಿಗಳಾಗಿದ್ದು, ಮರ್ಲಿನ್ ಮಾರ್ಟಿಸ್, ವಕೀಲರಾದ ಹನುಮಂತ ರಾವ್, ಡೀಡ್ಸ್ ಸಲಹೆಗಾರರಾದ ಮೋಹನಚಂದ್ರ, ಯುನಿಸೆಫ್‌ನ ಹರೀಶ್ ಜೋಗಿ ಉಪಸ್ಥಿತರಿದ್ದರು. ಲಿಂಗ–ಲಿಂಗತ್ವ, ಲಿಂಗತ್ವದ ಸಾಮಾಜೀಕರಣ, ಪಿತೃಪ್ರಧಾನತೆ, ಲಿಂಗತ್ವ ಹೇಳಿಕೆಗಳು, ಬಾಲ್ಯವಿವಾಹ, ಕೌಟುಂಬಿಕ ದೌರ್ಜನ್ಯ ಕಲಾಪಗಳನ್ನು ಮರ್ಲಿನ್, ಫರೀದಾ ಬೇಗಂ, ರೇಣುಕಾ, ಪ್ರಭಾವತಿ ಬೆಟಗೇರಿ, ಹರೀಶ್ ಜೋಗಿ ನಿರ್ವಹಿಸಿದರು. ಸರ್ವೋದಯ ಸಂಸ್ಥೆ, ದೇವಲಾಪುರ, ವಿಜಯನಗರಗಳಲ್ಲಿ ತಳಮಟ್ಟದ ಮಾಹಿತಿ ಕಾರ್ಯಕ್ರಮಗಳನ್ನು ನಡೆಸಲಾಯಿತು. ವೀರೇಶ್ ಆಲಗುಂಡಿ, ಬಸಮ್ಮ ಕಡಿವಾಳ, ಅಶ್ವಿನಿ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ದಿವ್ಯಾ ಜೋಗಿಯವರು ಎಲ್ಲರಿಗೂ ವಂದನೆ ಸಲ್ಲಿಸುವ ಮೂಲಕ ತರಬೇತಿಯು ಸಂಪನ್ನಗೊಂಡಿತು. ತರಬೇತಿಯ ಆರಂಭದಿಂದ ಅಂತ್ಯದವರೆಗೆ ಸರ್ವೋದಯ ಸಂಸ್ಥೆಯ ಸಹಕಾರ ಸ್ತುತ್ಯರ್ಹವಾಗಿತ್ತು.



## ಸಹಭಾಗಿ ಸ್ವಯಂಸೇವಾ ಸಂಸ್ಥೆಗಳ ಸಭೆ ಮತ್ತು ಪೂರಕ ಕಾನೂನು ಸುಗಮಗಾರರ ಅನುಭವ ಹಂಚಿಕೆ

ಕೊಪ್ಪಳದಲ್ಲಿ ಡೀಡ್ಸ್ ಸಂಸ್ಥೆಯ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆಯಲು ಸಹಕರಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳ ಸಭೆಯನ್ನು 06.10.2017 ರಂದು ನಡೆಸಲಾಯಿತು. ಮನೆ ಮನೆ ಸಾಮಗ್ರಿಗಳನ್ನು ಸಂಗ್ರಹಿಸಿಟ್ಟು, ತರಬೇತಿಗೆ ತಮ್ಮ ಸಿಬ್ಬಂದಿಗಳನ್ನು ಕಳುಹಿಸಿಕೊಟ್ಟು ಪ್ರತ್ಯಕ್ಷ



ಹಾಗೂ ಇತರ ಪರೋಕ್ಷ ಸಹಕಾರ ನೀಡುತ್ತಿರುವ ಈ ಸಂಸ್ಥೆಗಳಿಗೆ ಡೀಡ್ಸ್ ಸಂಸ್ಥೆಯು ಆಭಾರಿಯಾಗಿದೆ ಎಂದು ಸಂಸ್ಥೆಯ ನಿರ್ದೇಶಕರಾದ ಮರ್ಲಿನ್ ಮಾರ್ಟಿಸ್ ಕೃತಜ್ಞತೆ ಸಲ್ಲಿಸಿದರು. ಕೊಪ್ಪಳದ ಮಹಿಳಾ ಮತ್ತು ಪರಿಸರ ಅಭಿವೃದ್ಧಿ ಸಂಸ್ಥೆ, ಸೇವಾ ಸಂಸ್ಥೆ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಆಚೀವ್ ಕೌಶಲ ತರಬೇತಿ ಸಂಸ್ಥೆ, ಸರ್ವೋದಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗಳ ಮುಖ್ಯಸ್ಥರು ಮತ್ತು ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಮೋಹನಚಂದ್ರ, ಸರ್ವೋದಯ ಸಂಸ್ಥೆಯ ನಾಗರಾಜ ದೇಸಾಯಿ ಸ್ವಾಗತಿಸಿ ದಿವ್ಯಾ ಜೋಗಿ ವಂದಿಸಿದರು. ಅದೇ ದಿನ ಪೂರಕ ಕಾನೂನು ಸುಗಮಗಾರರ ಅನುಭವ ಹಂಚಿಕೆ ಸಭೆಯೂ ನಡೆಯಿತು. ಸಭೆಯಲ್ಲಿ 25 ಮಂದಿ ಸುಗಮಗಾರರು ಭಾಗವಹಿಸಿದ್ದರು.



ವರದಿ:
ದಿವ್ಯಾ ಜೋಗಿ

### ತಳಹಂತದ ಮಾಹಿತಿ ಕಾರ್ಯಕ್ರಮಗಳು

ನವೆಂಬರ್ ಅಂತ್ಯದವರೆಗೆ ಗದಗಿನಲ್ಲಿ 28 ಪಿಎಲ್‌ಎಫ್‌ಗಳು 102 ತಳಹಂತದ ಕಾರ್ಯಕ್ರಮಗಳನ್ನು ನಡೆಸಿದ್ದು, ಒಟ್ಟು 2456 ಭಾಗಾರ್ಥಿಗಳಿಗೆ ಲಿಂಗತ್ವ, ಕೌಟುಂಬಿಕ ದೌರ್ಜನ್ಯ, ಬಾಲ್ಯವಿವಾಹದ ಮಾಹಿತಿಗಳನ್ನು ನೀಡಿರುತ್ತಾರೆ. ಕೊಪ್ಪಳದಲ್ಲಿ 30 ಪಿಎಲ್‌ಎಫ್‌ಗಳು 92 ಕಾರ್ಯಕ್ರಮಗಳನ್ನು ನಡೆಸಿದ್ದು, 2181 ಮಂದಿಗೆ ಮಾಹಿತಿಯನ್ನು ಹಂಚಿರುತ್ತಾರೆ.

### ಸಂವಾದ ಅಭಿಯಾನ





ಮುಖಪುಟ ವಿನ್ಯಾಸ: ಸುನೈಫ್ ವಿಟ್ಲ    ಮುದ್ರಣ: ಪಿಕ್ಸೆಲ್ಸ್ ಡಿಸೈನರ್ಸ್, ಕುದ್ರೋಳಿ, ಮಂಗಳೂರು

DEEDS SAMVAADA - A news letter by DEEDS, Mangalore

ವಿಳಾಸ : ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್ (ಡೀಡ್ಸ್), ಆನಂದ ಅಪಾರ್ಟ್‌ಮೆಂಟ್ಸ್, ಕದ್ರಿ, ಮಂಗಳೂರು, ದ.ಕ. 575002, ದೂರವಾಣಿ: 0824–2217022, 4281037

E-mail : deeds82@rediffmail.com